CC-O. In Public Domain. Digitized by eGangotri

ಹೊಸ ರೂಪದ 'ಹಿತೋಪದೇಶ'

ಹೀನ ಸೇವಕ

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ ಪ್ರಕಾಶಕರು, ಮೈಸೂರು

Sri Vidyabhavan Book Centre, Shimoga

CC-O. In Public Domain. Digitized by eGangotri

ಪೀಠಿಕೆ

ಎಳೆ ವಯಸ್ಸಿನಲ್ಲೇ ತಿಳಿ ಮನಸ್ಸಿನ ಮೇಲೆ ಒತ್ತಿದ ಆಚ್ಚು ಜೀವಾವಧಿ ತನ್ನ ಪ್ರಭಾವವನ್ನು ಬೀರುತ್ತದೆ ಎಂಬುದು ಸಕಲರೂ ಆಡುವ ಮಾತು. ಆದರೆ ಈ ಸೂತ್ರವನ್ನು ಆರ್ಥವತ್ತಾಗಿ ಅನುಸರಿಸುವವರು ಎಷ್ಟು ವಿರಳ! ಬಾಲ್ಯದಲ್ಲಿನ ಪರಿಸರ, ಆದರ್ಶಗಳು ಅಳವಾಗಿ ಬೇರುಬಿಟ್ಟು, ವ್ಯಕ್ತಿಯ ಜೀವನಪಥವನ್ನೇ ಎಷ್ಟು ವ್ಯಾಪಕವಾಗಿ, ಅಳಿಸಲಾಗದಂತೆ ರೂಪಿಸಿಬಿಡುತ್ತವೆ ಎಂಬುದನ್ನು ಇಂದಿನ ಪ್ರಾಣಿ-ಮನಶ್ಶಾಸ್ತ್ರದ (Animal Psychology) ಸಂತೋಧನೆಗಳು ಪ್ರತ್ಯಕ್ಷವಾಗಿ ಪ್ರತಿಪಾದಿಸುತ್ತವೆ. Joan Luckey, Konrad Lorenz, Jean Holter,—ಇಂಥವರ ಪ್ರಯೋಗಗಳು, ಶಿಶುಮನಸ್ಸಿನ ಮೇಲೆ ವಾತಾವರಣ, ಹಿರಿಯರ ನಡೆನುಡಿಗಳು ಅಪಾರ ಪ್ರಭಾವಕಾರಿಗಳು ಎಂಬಂಶವನ್ನು ದೃಢೀಕರಿಸುತ್ತವೆ. ಇನ್ನೊಂದು ಕಡೆ, ಮೇರಿಯಾ ಮಾಂಟೆಸೋರಿಯ ಅಮೋಘ ಪ್ರಯೋಗಗಳು ಹೇಗೆ ಮಕ್ಕಳನ್ನೆಲ್ಲಾ ಉತ್ತಮ ವ್ಯಕ್ತಿಗಳನ್ನಾಗಿ ಶಿಲ್ಪಿಸಲು ಸಾಧ್ಯ ಎಂಬುದನ್ನು ನಿರ್ವಿವಾದವಾಗಿ ತೋರಿಸುತ್ತವೆ.

ಮೇಲಿನ ಅಂಶಗಳನ್ನು ಜನರು ಸ್ಥೂಲವಾಗಿ ಅರಿತಿರಬಹುದು. ಆದರೆ ಇವಕ್ಕಿಂತ, ಮಕ್ಕಳು ಅಸಕ್ತಿಯಿಂದ ಕೇಳಿ ಮತ್ತು ಸ್ವಂತವಾಗಿ ಓದಿ ಮೆಲುಕು ಹಾಕುವ ಸಾಹಿತ್ಯ-ಸಾಮಗ್ರಿಗಳ ಪ್ರಭಾವವು ಅವರ ಮೇಲೆ ಅಪರಿಮಿತ ಎಂಬುದು ಬಹುಮಂದಿಗೆ ಇನ್ನೂ ಮನಮುಟ್ಟಿಲ್ಲ. ಇದನ್ನು ದೃಢವಾಗಿ ನಂಬಿದ್ದ ಮೇಧಾವಿ ವಿಷ್ಣುಶರ್ಮ ಜನಸ್ವಭಾವ, ಲೋಕರೀತಿ, ನೀತಿ, ಸುಚರಿತೆಗಳನ್ನು ಕೂಡಿಸಿ ತನ್ನ 'ಹಿತೋಪದೇಶ'ವನ್ನು ಭಟ್ಟಿ ಇಳಿಸಿದ್ದಾನೆ.

ವಿಷ್ಣುಶರ್ಮನ ತತ್ವ ಮತ್ತು ಸಂದೇಶಗಳು ಈ ಗ್ರಂಥದಲ್ಲಿ ಸ್ಪಷ್ಟವಾಗಿವೆ. ಸಮಾಜ ಸುಖಕ್ಕೆ ಧಕ್ಕೆ ತರುವ ಸ್ವಾರ್ಥ ಕಲಾಪಗಳೇ ಅಧರ್ಮ, ಅನಾಚಾರ, (ತನ್ನದೂ ಸೇರಿ) ಸರ್ವರ ಸುಖವೂ ಧ್ಯೇಯವಾಗಿರುವ ಕಾರ್ಯವೇ ಪವಿತ್ರ, ಪುಣ್ಯ. ಈ ಬಗೆಯ ಕರ್ಮಗಳು, ಇಂದಲ್ಲ ನಾಳೆ, ತಕ್ಕ ಫಲಗಳನ್ನನುಭವಿಸಲೇಬೇಕು. ಈ ಅಮೃತ ಸಿದ್ಧಾಂತವನ್ನು ಆಕರ್ಷಣೀಯವಾಗಿ ನೆಯ್ದಿರುವ ಕೃತಿ ಎಂದೆಂದೂ ಜನಪ್ರಿಯವಾಗಿರುವುದರಲ್ಲೇನು ಆಶ್ಚರ್ಯ?

'ಹಿತೋಪದೇಶ' ಹುಟ್ಟಿದಂದಿನಿಂದ ಹಲವಾರು ಭಾಷೆಗಳಲ್ಲಿ ನೂರಾರು ಭಾಷಾಂತರಗಳು ವಿವಿಧ ವೇಷಗಳನ್ನು ತೊಟ್ಟು ಅನೇಕ ಕಥಾಸರಣಿಗಳು ಹೊರಬಂದಿವೆ. ಆದ್ದರಿಂದ ಮತ್ತೊಂದು 'ಹೊಸ ರೂಪದ ಹಿತೋಪದೇಶ' ಈಗ ಪ್ರವೇಶಿಸುವ ಆವಶ್ಯಕತೆಯೇನು ಎಂಬುದು ಸಾಧುವಾದ ಪ್ರಶ್ನೆ.

[ಹೊದಿಕೆಯ ಪುಟ ನೂರರಲ್ಲಿ ಮುಂದುವರಿದಿದೆ—

Sri Vidyabharathi Book Centre, Sringeri

ಹೊಸ ಮೂಡಪದ ಹಿಂದೋಪದೇಶ
CC-O. In Public Domain. Digitized by eGangotri

ಹೀನ ಸೇವಕ

Srividya D.S
7th Standard

ಕೆ. ಎಸ್. ರಂಗಪ್ಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು
Sri Vidyabharathi Book Centre, Sringeri

HEENA SEVAKA (*The Mean Menial*)—A New Version of *Hitopadesha* by K. S. RANGAPPA. Published by GEETHA BOOK HOUSE, K. R. Circle, Mysore 570 001. First Published 1986.

CC-O. In Public Domain. Digitized by eGangotri

ಮೊದಲ ಮುದ್ರಣ 1986

ಕಾಪಿರೈಟ್ © ಕೆ. ಎಸ್. ರಂಗಪ್ಪ

NOTE : All rights, including those of translation, broadcasting, staging and screening, and public reading of this work are fully protected according to the International Copyright Convention. Written permission must be obtained from the author for the use of this work in any manner, except for bona fide criticism or review.

ಮುದ್ರಕರು : ಜಿ. ಎಸ್. ನಾಗೇಂದ್ರ, ಕರ್ನಾಟಕ ಪ್ರೆಸ್
ಬಜ್ಜಣ್ಣ ಲೈನ್, ಚಾಮರಾಜಪುರಂ, ಮೈಸೂರು 570 004

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀನ ಸೇವಕ

ಹಿಂದಿನ ಕಾಲದಲ್ಲಿ ವರ್ಧಮಾನವೆಂಬ ಪಟ್ಟಣ ಒಂದಿತ್ತು. ಸಂಪತ್ತಿನಿಂದ ಶೋಭಿಸುತ್ತಿದ್ದ ಆ ನಗರದಲ್ಲಿ ದಂತಿಲನೆಂಬ ಶ್ರೀಮಂತ ವ್ಯಾಪಾರಿ ಇದ್ದ. ಅವನನ್ನು ಕಂಡರೆ ರಾಜನಿಗೆ ವಿಶ್ವಾಸ, ಜನರಿಗೆ ಮರ್ಯಾದೆ. ಆದರೂ ದಂತಿಲನಿಗೆ ಸ್ವಲ್ಪವೂ ಗರ್ವವಿಲ್ಲ. ಏಕೆಂದರೆ, ರಾಜನಿಗೆ ಮಾತ್ರ ಬೇಕಾದವನಾದರೆ ಜನರಿಗೆ ತನ್ನಲ್ಲಿ ಅಸೂಯೆ ಹುಟ್ಟುವುದು ಎಂದು ಅವನಿಗೆ ಗೊತ್ತು. ಅಂಥವನು ಒಂದಲ್ಲ ಒಂದು ದಿನ ರಾಜನ ಕೋಪಕ್ಕೇ ಕುತ್ತಾಗಲೂಬಹುದು. ರಾಜನ ವಿಶ್ವಾಸ ಅತಿ ಮುದ್ದು ಮಾಡಿದ ಮಗುವಿಗಿಂತ ಚಂಚಲ! ಇದನ್ನು ಅರಿತಿದ್ದ ಜಾಣ ವರ್ತಕ ಇಬ್ಬರನ್ನೂ ಒಲಿಸಿಕೊಂಡಿದ್ದ. ರಾಜಭಕ್ತ ಹಾಗೂ ಜನೋಪಕಾರಿಯೆಂದಿದ್ದುದರಿಂದ ಎಲ್ಲರಿಗೂ ಒಲವಿನವನಾಗಿದ್ದ ದಂತಿಲ.

ಧನಿಕ ವರ್ತಕ ದಂತಿಲನ ಮನೆಯಲ್ಲಿ ಮದುವೆಯೊಂದು ಆಗಬೇಕಾದ ಕಾಲ ಬಂತು. ಅದು ಅವನ ಮಗಳ ಮದುವೆ. ಪಟ್ಟಣದ ಗಣ್ಯರೇ ಅಲ್ಲದೆ, ಸ್ವಲ್ಪ ಹೆಸರುವಾಸಿಗಳೂ, ಪರಿಚಯಸ್ಥರೂ, ಎಲ್ಲರೂ ಲಗ್ನಕ್ಕೆ ಕರೆಯಲ್ಪಟ್ಟಿದ್ದರು. ದಾನಿ ದಂತಿಲ ಅರಮನೆಯ ಆಳುಕಾಳುಗಳನ್ನು ಮರೆಯಲಿಲ್ಲ. ಆಳಾಗಲಿ ಅರಸಾಗಲಿ, ಅವನಿಗೆ ಎಲ್ಲರಲ್ಲೂ ವಿಶ್ವಾಸ.

ಒಳ್ಳೆಯ ನಡೆ-ನುಡಿ ಅರಿತಿದ್ದ ರಾಜಪುರೋಹಿತ ಮದುವೆಗೆ

Sri Vidyabharathi Book Centre, Sirsi

CC-O. In Public Domain. Digitized by eGangotri

ಬಂದವರನ್ನೆಲ್ಲ ಆದರದಿಂದ ಬರಮಾಡಿಕೊಂಡು ಎಲ್ಲರಿಗೂ ಮನದಣಿಯುವಂತೆ ಔತಣ ಮಾಡಿದ. ತಕ್ಕ ಉಡುಗೊರೆಗಳನ್ನು ಧಾರಾಳವಾಗಿ ಹಂಚಿದ. ಇಷ್ಟಾದರೂ ರಾಜಸೇವಕನೊಬ್ಬನಿಗೆ ಅಪಮಾನವಾದಂತಾಗಿ ಅವನಲ್ಲಿ ಕೋಪದ ಕಿಚ್ಚೆಬ್ಬಿಸಿಬಿಟ್ಟಿತು. ಇದಕ್ಕೆ ನಿಜವಾಗಿಯೂ ಗೋರಂಭನೇ —ಅದೇ ಅರಮನೆ ಜವಾನನ ಹೆಸರು—ಕಾರಣ.

ಮದುವೆ ಮಂಟಪ ಎಲ್ಲೆಲ್ಲೂ ಎಣ್ಣೆ ಪಂಜು, ದೀವಿಗೆಗಳಿಂದ ಬೆಳಗುತ್ತಿದೆ. ಹಸಿರು ತೋರಣಗಳು, ಹೂಮಾಲೆಗಳು ಸುತ್ತಲೂ ತೂಗಾಡುತ್ತಿವೆ. ಪುಷ್ಪ, ಗಂಧ, ಪನ್ನೀರುಗಳ ಸುವಾಸನೆಗಳಿಂದ ತುಂಬಿ, ವಾದ್ಯ, ನೃತ್ಯ, ಸಂಗೀತಗಳ ಇಂಪು ಧ್ವನಿಗಳಿಂದ ಮೊಳಗುತ್ತಿದೆ ಕಲ್ಯಾಣಮಂದಿರ. ಸುಂದರವಾಗಿ ಸಿಂಗರಿಸಿಕೊಂಡು ಬಂದಿರುವ ಜನರ ಸಂದಣಿ, ಸಂಭ್ರಮ ಮಂಟಪದಲ್ಲಿ.

ಈ ಮನೋಹರ ಮಂಟಪಕ್ಕೆ ಬಂದ, ಅರಮನೆಯ ಪರಿಚಾರಕ ಗೋರಂಭ. ಠೀವಿಯಿಂದ ಕೈ ಬೀಸಿಕೊಂಡು ಅರಮನೆಯ ದೊಡ್ಡ ಅಧಿಕಾರಿಯಂತೆ ಪ್ರವೇಶಿಸಿದ. ಇವನಿಗೆ, ಉತ್ತಮರು ಎಂದೂ ಗರ್ವದಿಂದ ಮೆರೆಯುವುದಿಲ್ಲ—ಎಂಬುದು ತಿಳಿಯದು. ತಾನು ವಿನಯ ನಮ್ರತೆಗಳಿಂದ ನಡೆದುಕೊಂಡರೆ, ತನ್ನನ್ನು ಜನರು ಲೆಕ್ಕಕ್ಕೆ ಬಾರದವನು, ಇವನು ಯಾರೋ—ಎಂದು ಉದಾಸೀನ ಮಾಡುವರು, ಎಂಬುದೇ ಇವನ ಭಾವನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಗಿಲಲ್ಲಿ ರೇಶ್ಮೆ ವಸ್ತ್ರ, ಜರಿ ರುಮಾಲುಗಳನ್ನುಟ್ಟು ಯಜಮಾನ ಅತಿಥಿಗಳನ್ನು ನಮಸ್ಕರಿಸಿ ಹಸನ್ಮುಖದಿಂದ ಸ್ವಾಗತಿಸುತ್ತಿದ್ದಾನೆ. ಮಂಟಪದೊಳಕ್ಕೆ ಕರೆದುಕೊಂಡು ಹೋಗಿ, ಅವರವರೆ ದರ್ಜೆಗೆ ತಕ್ಕ ಸ್ಥಳದಲ್ಲಿ ಕೂಡಿಸಿ ಹೂ ಗಂಧಗಳನ್ನು ಕೊಟ್ಟು, ರುಚಿಯಾದ ತಿಂಡಿ ತೀರ್ಥಗಳನ್ನು ಸ್ವೀಕರಿಸಬೇಕೆಂದು ಉಪಚರಿಸುತ್ತಾನೆ. ಅದೇ ರೀತಿ ರಾಜಸೇವಕ ಗೋರಂಭನನ್ನೂ ಬರಮಾಡಿಕೊಂಡು ತನ್ನ ಒಡನಾಡಿಗಳೊಡನೆ ಕೂಡುವಂತೆ ಕೈ ತೋರಿಸಿದ ದಂತಿಲ. ಆದರೆ ಜಂಭದ ಗೋರಂಭ ಹುಂಜದಂತೆ ನುಗ್ಗಿಹೋಗಿ—ಮುಂದೆ—ನಗರದ ಶ್ರೀಮಂತರ ಪಂಕ್ತಿಯಲ್ಲಿ—ಕೂತು ಬಿಟ್ಟ; ಅದೂ, ರಾಜನಿಗಾಗಿ ಮೀಸಲಾಗಿಟ್ಟಿದ್ದ ಬೆಳ್ಳಿಯ ಪೀಠದ ಸಮೀಪದಲ್ಲೇ! ತಾನು ರಾಜನ ಸ್ವಂತ ಸೇವಕನಲ್ಲವೇ? ಅರಮನೆಯಲ್ಲಿ ಅರಸನಿಗೆ ಅಷ್ಟು ಹತ್ತಿರ ಇರುವಾಗ, ಇಲ್ಲೇಕೆ ಕೂಡದು?—ಎಂಬುದೇ ಗೋರಂಭನ ವಾದ.

ಜಪಾನ ಗೋರಂಭನ ನಡತೆ ಯಜಮಾನ ದಂತಿಲನನ್ನು ಇಕ್ಕಟ್ಟಿಗೆ ಸಿಕ್ಕಿಸಿಬಿಟ್ಟಿತು. ಗೋರಂಭ ಊಳಿಗದವನಾಗಿದ್ದರೂ ಅವನ ಮನಸ್ಸು ನೋಯಿಸಲು ದಂತಿಲನಿಗೆ ಇಷ್ಟವಿಲ್ಲ. ಆದರೆ ಊರಿನ ಶ್ರೀಮಂತರು, ಪಂಡಿತರು—ಏಕೆ, ಮಹಾರಾಜರೇ—ಏನೆಂದುಕೊಂಡಾರು! ತಮಗೆ ಅಪಮಾನ ಮಾಡಬೇಕೆಂದೇ ಈ ಕ್ರಾಗೆಯನ್ನು ಹಂಸಗಳೊಂದಿಗೆ ನುಗ್ಗಿಸಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ದ್ವಾನೆ ಎಂದು ತಪ್ಪು ತಿಳಿದರೂ ತಿಳಿಯಬಹುದು !

ಯಜಮಾನ ಹೋಗಿ ವಿನಯದಿಂದ ಗೋರಂಭನನ್ನು ತನ್ನ ಜೊತೆಯವರೊಡನೆ ಹಿಂದೆ ಕೂಡುವಂತೆ ಹೇಳಿದ. ಇದು ಗೋರಂಭನಿಗೆ ಸರಿಬೀಳಲಿಲ್ಲ. ತನಗೆ ಅಪಮಾನ ವಾಯಿತೆಂದೆಣಿಸಿದ; ಅವನ ಮುಖ ಕೆಂಪೇರಿತು. ಇವನ ಗರ್ವದ ನಡವಳಿಕೆಯನ್ನು ಆಶ್ಚರ್ಯ, ಅಸಮಾಧಾನದಿಂದ ನೋಡುತ್ತಲೇ ಹಿಂದೆ ಕುಳಿತಿದ್ದ ಇವನ ಸಂಗಾತಿಗಳು ತಮ್ಮ ತಮ್ಮಲ್ಲೇ ನಗುತ್ತಿದ್ದಾರೆ. ಇವನ ಅಧಿಕಪ್ರಸಂಗತನಕ್ಕೆ ತಕ್ಕ ಶಿಕ್ಷೆಯಾಯಿತೆಂದು ಪಿಸುಗುಟ್ಟುತ್ತಿದ್ದಾರೆ.

ಗೋರಂಭ ಜಾಣನಾಗಿದ್ದರೆ ತಾನೂ ಅವರೊಡನೆ ಸೇರಿ, ನಕ್ಕು, ಅದೇ ಒಂದು ವಿನೋದ, ಕುಚೇಷ್ಟೆ ಎಂಬಂತೆ ಆ ಪ್ರಸಂಗ ಅಲ್ಲಿಗೇ ಮುಗಿಸಿ ಮರೆಸಿಬಿಡುತ್ತಿದ್ದ. ಆದರೆ ಅವ ನೊಬ್ಬ ಮಡ್ಡಿ, ದುರಭಿಮಾನಿ. ಜನರೊಡನೆ ವರ್ತಿಸುವ ರೀತಿ ಹೇಗೆ ಅವನಿಗೆ ತಿಳಿಯದೋ, ಅದೇ ರೀತಿ ದಂತಿಲನಂತಹ ಶೀಲವಂತರ ಮಾತಿಗೆ ನಗುನಗುತ್ತಾ ಮನ್ನಣೆ ಕೊಟ್ಟು ನಡೆಯುವ ರೀತಿಯೂ ಗೋರಂಭನಿಗೆ ತಿಳಿಯದು.

ನಿಜವಾಗಿಯೂ ತನ್ನದೇ ತಪ್ಪೆಂಬುದು ಅವನಿಗೆ ತೋಚಲೇ ಇಲ್ಲ. ಕೀಳು ಮನಸ್ಸು. ತಿಳಿಗೇಡಿಗಳಾದಷ್ಟೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದು ಇಂಥವರಿಗೆ ಕಷ್ಟ. ಉತ್ತಮರು ತಮ್ಮ ನಡೆನುಡಿಗಳಲ್ಲಿ ಎಡವಿದ ಕ್ಷಣವೇ ತಮ್ಮ ತಪ್ಪು ಕಂಡುಕೊಂಡು ಸರಿಪಡಿಸಿಕೊಳ್ಳಲು ಯತ್ನಿಸುವರು. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಸ ಮನೋಭಾವ ವಿರಸ-ವೈಷಮ್ಯಗಳನ್ನು ದೂರ ಇಡುತ್ತದೆ. ಈ ಗುಟ್ಟಿನ ಗಂಧವೇ ಇಲ್ಲದ ಗೋರಂಭ ಕೋಪಾವೇಶದಿಂದ ದಂತಿಲನನ್ನು ತನ್ನೊಳಗೇ ಶಾಪ ಹಾಕುತ್ತಾ, ಇವನಿಗೆ ಸರಿಯಾದ ಶಿಕ್ಷೆ ಮಾಡುವೆನೆಂದು ಆಣೆ ಇಟ್ಟು, ಕೈಬೀಸುತ್ತಾ, ರಭಸದಿಂದ ಮದುವೆಮಂಟಪ ಬಿಟ್ಟು ಹೊರಟೇಹೋದ. ತನಗೆ ದಂತಿಲ ಮಾನ ಕಳೆದಂತೆ, ಎಲ್ಲರ ಮುಂದೆ ಅವನ ಮಾನ ತಾನು ಕಳೆಯುವುದಾಗಿ ಶಪಥ ಮಾಡಿದ, ಸೇವಕ.

ಕೀಳು ಮನುಷ್ಯರ ಮನಸ್ಸು ಹೇಗಾದರೂ ಕೀಳೇ. ಆದರೆ ಹೀನ ಗುಣ ಬಡವರಿಗೆ ಮಾತ್ರ ಮೀಸಲಲ್ಲ. ಹಣವಂತರನೇಕರು ಕಾಸು ಬಿಚ್ಚದ ಕುಬೇರನಂತೆ, ಗತಿಯೇ ಇಲ್ಲದ ತಿರುಕರಂತೆ ನಡೆದುಕೊಳ್ಳುತ್ತಾರೆ. ಅನೇಕರು ಪಂಡಿತರಾದರೂ, ತಮ್ಮ ಅಲ್ಪಬುದ್ಧಿ ಬಿಡಲಾರರು.

ಗೋರಂಭನ ಕೊಬ್ಬು ನಡತೆ, ಅದಕ್ಕೆ ಅವನಿಗಾದ ಶಿಕ್ಷೆ —ಎಲ್ಲವನ್ನೂ ಜನರು ಕೆಲವು ದಿನಗಳಲ್ಲೇ ಮರೆತರು. ಆದರೆ ಗೋರಂಭನಿಗೆ ಮಾತ್ರ, ಬರೆ ಎಳೆದ ಹೊಪ್ಪಳೆಯಂತೆ, ಮರೆಯಲೇ ಆಗಲಿಲ್ಲ. ಶತ್ರುವಿನ ಮೇಲೆ ಜಿದ್ದು ತೀರಿಸಿಕೊಳ್ಳುವ ಹಟ ಅವನನ್ನು ಸದಾ ಕಾಡಿಸುತ್ತಲೇ ಇತ್ತು. ಆದರೆ ಅದೇನು ಮಕ್ಕಳಾಟವೇ? ದಂತಿಲನಂತಹ ಆನೆಗೆ ತಾನು ಗುಂಯ್ ಎಂದು ಹಾರಾಡುವ ನೊಣಕ್ಕಿಂತ ಕಡೆ ಎಂಬುದನ್ನೂ ಬಲ್ಲ ಅವನು.

 CC-O. In Public Domain. Digitized by eGangotri

ಸುಂಡಿಲಿಯ ಉರಿಗೋಪ
ಕೊಲುವ ಬೆಕ್ಕಿನ ಮೇಲೇನು ಫಲ ?
ಎಳ್ಳು ಕಾಳನ ಕುಣಿದಾಟ
ಕಾದ ಕಾವಲಿಯ ಮೇಲೇನು ಫಲ ?

–ಎಂದು ವ್ಯಸನ ಪಡುತ್ತಾನೆ. ಮರೆಯಲು ಯತ್ನಿಸುತ್ತಾನೆ. ಮರುಕ್ಷಣವೇ, ಸಮುದ್ರತೀರದ ಮೇಲಿನ ಅಲೆಗಳಂತೆ, ಬಹಿರಂಗ ಸಭೆಯಲ್ಲಿ ತನಗಾದ ಅಪಮಾನ ಮನಸ್ಸಿನಲ್ಲೆದ್ದು ಅಪ್ಪಳಿಸುತ್ತದೆ. 'ಶತ್ರುವನ್ನು ಬಲಿಹಾಕಲಾಗದ ನನ್ನ ಮುಯ್ಯಿ, ರೋಷ, ಹೆಣ್ಣಿನ ಕಣ್ಣೀರಂತೆ ನಿಷ್ಫಲ,' ಎಂದು ಕೊರಗುವನು.

ಕುದಿಯುತ್ತಿರುವ ಅಪಮಾನದ ನೆನಪಿನಿಂದ ರಾತ್ರಿ ನಿದ್ದೆಯೇ ಬರದು; ಶಾಂತಿ ಎಂಬುದು ದೂರವಾಯಿತು. ಹುಲ್ಲುಹಾಸಿಗೆಯ ಮೇಲೆ ಹೊರಳಾಡುತ್ತಾ, ಒಂದಲ್ಲ ಮತ್ತೊಂದು ಉಪಾಯ ಜೋಡಿಸುತ್ತಾನೆ. ದಂತಿಲನನ್ನು ಮರ್ದನ ಮಾಡಬೇಕೆಂಬುದೊಂದೇ ಗೋರಂಭನ ಚಿಂತೆ. ಆದರೆ ಎಲ್ಲಾ ಆಕಾಶದಲ್ಲಿ ಕಟ್ಟಿದ ಅರಮನೆಗಳೇ! ಆಗುವ ಕೆಲಸ ಯಾವುದೂ ಅಲ್ಲ.

'ಏಕಾಗದು!?' ಎಂದು ತನಗೆ ತಾನೇ ಸವಾಲು ಹಾಕಿ ಕೊಳ್ಳುತ್ತಾನೆ ಸೇವಕ. 'ಪುಟ್ಟ ಗುಬ್ಬಿಗಳು ಬೆಟ್ಟದಂಥ ಆನೆ ಕೆಡವಲಿಲ್ವಾ?' ಎಂದು ಹಳೇ ಕಥೆಯೊಂದನ್ನು ನೆನೆಸಿ ಕೊಳ್ಳುವನು. 'ಹಂಗೇ ದಂತಿಲನ ಸೊಕ್ಕ ಮುರ್ದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುರೀತೀನಿ!' ಎಂದು ಮತ್ತೆ ಮತ್ತೆ ತನ್ನ ಕತ್ತಲೆ ಗುಡಿಸಲಲ್ಲಿ ಪಣ ತೊಡುತ್ತಾನೆ ಅರಮನೆ ಜವಾನ.

ನೀಚ ಬುದ್ಧಿಯವರು ಒಳ್ಳೆಯ ಕೆಲಸ ಮಾಡಲು ದೃಢ ಮನಸ್ಸು ಮಾಡಲಾಗದಿದ್ದರೂ, ಇತರರ ಕೆಡುಕನ್ನು ಛಲದಿಂದ ಸಾಧಿಸಬಲ್ಲರು.

ಗೋರಂಭ ಅರಮನೆಯಲ್ಲಿ ರಾಜನು ಮಲಗುವ ಕೊಠಡಿಯ ಕಾವಲುಗಾರ. ಅದೇ ಅವನ ಕೊಬ್ಬು; ಜಂಭಕ್ಕೆ ಕಾರಣ. ರಾಜನಿಗೆ ತಾನು ಅತಿ ಸಮೀಪ ಇರುವುದರಿಂದ, ರಾಜನಿಗೆ ತಾನು ಅತಿ ಆಪ್ತ ಎಂದು ನೆನೆಸಿದ್ದಾನೆ. ಮೂಢನಿಗೆ ಒಳಗುಟ್ಟು ತಿಳಿದೇ ಇಲ್ಲ. ಮನಸ್ಸು ಒಂದೇ ರೀತಿ ಹರಿಯುವವರೇ ನಿಜವಾದ ಆಪ್ತರು—ಎಂಬ ಸತ್ಯ ಸೇವಕನಿಗೆ ಹೊಳೆದೇ ಇಲ್ಲ. ವಿಶ್ವಾಸದಿಂದ ನೆನೆಸಿಕೊಳ್ಳುವ ಮಿತ್ರ ಪರದೇಶದಲ್ಲಿದ್ದರೂ ಹತ್ತಿರದವನೇ. ಸದಾ ಕಾದಾಡುವ ಜೋಡಿ ಒಂದೇ ಭಾವಣೆಯಡಿಯಲ್ಲಿದ್ದರೂ ಅವರು ಶತ್ರುಗಳೇ—ಎಂಬ ಆಳವಿಚಾರವನ್ನು ಅಲ್ಪಬುದ್ಧಿ ಹೇಗೆ ತಾನೆ ಯೋಚಿಸಬಲ್ಲದು?

ರಾಜ ಮಲಗಿರುವಾಗ ಕೋಣೆಯನ್ನು ಕಾಯುತ್ತಿರುವುದೇ ಗೋರಂಭನ ಕೆಲಸ. ಒಂದು ರಾತ್ರಿ ಕಗ್ಗತ್ತಲಲ್ಲಿ ಹೀಗೇ ಕಾಯುತ್ತಿರುವಾಗ, ಸರ್ರನೆ ಉಪಾಯವೊಂದು—ಕೊಚ್ಚೆ ಮಡುವಿನಲ್ಲಿ ಗುಳ್ಳೆ ಕೆಳಗಿನಿಂದ ಮೇಲೇಳುವಂತೆ—ಗೋರಂಭನ ಮನಸ್ಸಿನಲ್ಲಿ ಪುಟ್ಟಿದೆದ್ದಿತು. 'ಆ! ಇದು! ಈಗವನಿಗೆ

CC-O. Vidyaranya Book Centre, Sringeri

 CC-O. In Public Domain. Digitized by eGangotri

ತಕ್ಕ ಸಿಕ್ಷೆ ಮಾಡ್ತೀನಿ!'—ಎಂದು ಹಿಗ್ಗಿದ. ದೇವರೇ ದಾರಿ ತೋರಿಸಿದ!—ಎಂದುಕೊಂಡ ಗೋರಂಭ.

ಮಾರನೆಯ ರಾತ್ರಿ ಎಂದಿನಂತೆ ರಾಜ ಮಲಗುವ ಕೊಠಡಿಯನ್ನು ಹೊಕ್ಕು ಸುಪ್ಪತ್ತಿಗೆಯ ಮೇಲೆ ಕಾಲು ಚಾಚಿ ಪವಡಿಸಿದ್ದಾನೆ. ಇನ್ನೂ ನಿದ್ದೆ ಹತ್ತಿಲ್ಲ. ರಾಜನ ಈ ಸ್ವಭಾವವನ್ನು ಗೋರಂಭ ಚೆನ್ನಾಗಿ ಬಲ್ಲ. ಆದರೂ ಏನೂ ತಿಳಿಯದವನಂತೆ ತಡೆಯಲಾರದೆ ನಿದ್ದೆ ಬಂದ ಹಾಗೆ ಕೊಠಡಿಯ ಬಾಗಿಲ ಹೊರಗೆ ಒರಗಿದ ಕಪಟಿ. ರಾಜನ ಕೋಣೆಯ ಬಾಗಿಲು ಬಿರುಕು ಬಿಟ್ಟಿರುವ ಹಾಗೆ ಮೊದಲೇ ಓರೆ ಮಾಡಿಬಿಟ್ಟಿದ್ದ.

ನಿದ್ದೆಯಲ್ಲಿ ಮಾತಾಡುವವನಂತೆ, ಕೆಲವು ನಿಮಿಷಗಳಾದ ಮೇಲೆ ಕಣ್ಣು ಮುಚ್ಚಿ, ವರಟಲು ಪ್ರಾರಂಭಿಸಿದ, ಕಾವಲುಗಾರ. ಈಗೊಂದು ಮಾತು, ಆಗೊಂದು ಮಾತು; ಯಾವುದೂ ಸ್ಪಷ್ಟವಿಲ್ಲ. ಒಂದು ಬಾರಿ ಗಟ್ಟಿಯಾಗಿ, ಇನ್ನೊಂದು ಸಲ ಮೆಲ್ಲಗೆ; ಅರ್ಥವೂ ಆಗದು, ಅರ್ಥವಾಗದೆಯೂ ಇಲ್ಲ. ಮಾತ್ರ, ಪ್ರತಿ ಪದವೂ ರಾಜನ ಕಿವಿಗೆ ತಪ್ಪದೆ ಬೀಳುವಂತೆ ವಟಗುಟ್ಟುತ್ತಾ ಹೋಗುತ್ತಿದ್ದಾನೆ ಕೃತ್ರಿಮಿ.

ಮೊದಮೊದಲು ಊಳಿಗದವನ ತೊದಲು ಮಾತುಗಳನ್ನು ನಸುನಗುತ್ತಾ ಕೇಳಿಸಿಕೊಂಡು ಮಲಗಿದ್ದಾನೆ ರಾಜ. ಇಂತಹ ಅವಕಾಶ ರಾಜನಿಗೆ ಅಪರೂಪ. ಜನರು ಮನಬಿಚ್ಚಿ ತನಗೆ ನಿಜ ಹೇಳರು ಎಂಬುದು ರಾಜನಿಗೆ ಗೊತ್ತು.

ಸ್ವಲ್ಪ ಹೊತ್ತು ಹೀಗೇ ಎಳೆದಾಡಿ ರಾಜನ ಗಮನ ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡೆ ಚೆನ್ನಾಗಿ ತಿರುಗಿರಬೇಕು ಎಂದೆನಿಸಿದಾಗ, ವಿಷದ ಚೀಲ ಬಿಚ್ಚಿದ ಕೊರಮ.

'ಅಬ್ಬಬ್ಬ! ಎಂಥ ಇಬ್ಬಂದಿ!' ಎಂದು ಹಠಾತ್ತಾಗಿ ಬಡ ಬಡಿಸಿದ. ಹಾಗೇ ಏನೋ ಗೊಣಗುಟ್ಟುತ್ತಾ ತೆಪ್ಪಗಾದ. 'ದಂತಿಲ್ಲೈನೋರು! ಇಂಥಾ ಚೇಳೂಂತ ಯಾರು ನಂಬತಾರೆ!' ಎಂದು ಉದುರಿಸಿದ ಇನ್ನೊಂದು ಸುಳ್ಳನ್ನು.

ಇದು ಕೇಳಿಸಿದ ಕ್ಷಣ ರಾಜನ ಕಿವಿ ನೆಟ್ಟಗಾಯಿತು. ಮುಗುಳುನಗೆ ಮಾಯವಾಗಿ ಕುತೂಹಲ ಎದ್ದಿತು. ಮುಂದೇನು ಹೊರಬೀಳುವುದೋ ತನ್ನ ನೆಚ್ಚಿನ ಸಲಹೆಗಾರನ ವಿಚಾರದಲ್ಲಿ?—ಎಂದು ಹಾಸಿಗೆಯಲ್ಲಿ ಎದ್ದು ಕೂತು ಕಾಯುತ್ತಿದ್ದಾನೆ ರಾಜ.

ಹಾಗೇ ಸ್ವಲ್ಪ ಕಾಯಿಸಿ, ಒದರಿದ ನೀಚ: 'ಹಯ್ಯೋ, ರಾಜರ ಮೇಲೇ ಕತ್ತಿ ಕಟ್ಟತೌನಲ್ಲಾ! ಬಾಯಲ್ಲಿ ಬೆಳ್ಳಿಪ್ರೆ ಕಚ್ಚಾಕೂ ಬರಾಕಿಲ್ಲ ಅನ್ನೋ ಹಂಗವ್ನೆ, ತಂತ್ರಿ ಮಂತ್ರಿ! ದಣೀ ಮೇಲೇ ಮಸಲತ್ತು! ಪಾಪಿ! ಪಾಪಿ!'

ಕಾವಲುಗಾರನ ಕನವರಿಕೆ ಕೇಳಿ, ರಾಜನಿಗೆ ಒಂದು ಕಡೆ ಆಶ್ಚರ್ಯ; ಗಾಬರಿ ಇನ್ನೊಂದು ಕಡೆ! ತನ್ನ ಕಿವೀನೇ ನಂಬ ಲಾರ! ಅದ್ಯಾವುದು ದಂತಿಲ ಕಟ್ಟುತಿರೋ ಕತ್ತಿ, ತಿಳಿದು ಕೊಳ್ಳೋಣ—ಎಂದು ಉಸಿರು ಹಿಡಿದು ಕಾಯುತ್ತಿದ್ದಾನೆ ರಾಜ. ಆದರೆ ಚಾಲಕಿನ ಸೇವಕ ಗೊರಕೆ ಬಿಡಲು ಪ್ರಾರಂಭಿಸಿದ್ದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನು ಕುತೂಹಲವನ್ನು ತಡೆಯಲಾರದೆ, 'ಅದೇನು ನೀನು ಗಳಗತಿರೋದು?!' ಎಂದು ಗುಡುಗಿದ ರಾಜ.

ತಕ್ಷಣ, ಆಗ ಎಚ್ಚರವಾದವನಂತೆ ನೆಗೆದೆದ್ದ ಗೋರಂಭ. ಅತ್ತ, ಇತ್ತ, ಸುತ್ತ ನೋಡಿ, 'ಓ! ಚಾಕ್ರಿ ಪೊತ್ತಲ್ಲಿ ಮೈ ಮರೆತೆ, ಮಾಸ್ವಾಮಿ! ತಪ್ಸಾಯ್ತು! ಮನ್ಸ್ಬೇಕು, ದೊಡ್ಡ ಬುದ್ದಿಯೋರು!' ಎಂದು ಬೇಡಿಕೊಂಡ.

'ಅದೇನದು, ಕತ್ತಿ ಕಟ್ಟುತಿರೋದು ನನ್ನ ಮೇಲೆ ದಂತಿಲ್ಯೆನೋರು? ನಿಜ ಹೇಳು,' ಎಂದು ಆಜ್ಞೆ ಮಾಡಿದ ಅರಸ.

'ಆಂ! ಕತ್ತಿ ಕಟ್ಟುತಾರಾ?! ದಂತಿಲ ಸ್ವಾಮಿಯೋರಾ?! ಏನೂ ನಾನರಿಯೆ ಬುದ್ದಿ,' ಎಂದು ನಾಟಕ ಮುಂದುವರಿಸಿದ ಗೋರಂಭ.

ತನ್ನ ಸುಳ್ಳು ದೂರನ್ನು ರಾಜನ ಬಾಯಿಂದ ಕೇಳಿದಾಗ ಆಶ್ಚರ್ಯ ಅಪನಂಬಿಕೆ ನಟಿಸುತ್ತಾ, 'ಅಯ್ಯೋ ದೇವ್ರು, ಎಲ್ಲಾರ ಉಂಟಾ?! ಬಂಗಾರದಂತ ಆಸಾಮಿ ದಂತಿಲ ಸ್ವಾಮಿಯೋರು. ಯಾರಾದ್ರೂ ಅವರ ಮೇಲೆ ಸುಳ್ಳು ಪೊರ್ಕಿದ್ರೆ ಅವರ ಬಾಯಿ ಸೇದೋದೀತು! ಬಿಡ್ತು ಬಿಡ್ತು! ಅದೆಲ್ಲೋ ನನ್ನ ಉಚ್ಚ ಕನಸಿಬೇಕು, ಬುದ್ದೀ—ಕನಸು ಎಂದೆಂಪ್ಗೂ ಉಚ್ಚುಚ್ಚೇ ಮಾಸ್ವಾಮಿ! ಮಾಫಿ ಮಾಡ್ಬೇಕು, ನನ್ನೊಡೆಯ' —ಎಂದು ರಾಜನ ಕಾಲಿಗೆ ಬಿದ್ದ ಗೋರಂಭ.

ಅರಸ ಊಳಿಗದವನನ್ನೇನೋ ಮನ್ನಿಸಿದ. ಆದರೆ ಕಾವಲುಗಾರನ ಕನವರಿಕೆ ಅಂಟುಪುರಲೆಯಂತೆ ರಾಜನ ಮನಸ್ಸಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಟಿಕೊಂಡಿತು. ಪದೇ ಪದೇ ಸೇವಕನ ಬಡಬಡಿಕೆ ಕೇಳಿ ಬರುತ್ತಿದೆ. ಊಳಿಗದವನ ಕನಸು ಹಾಗಾದರೆ ಪೂರಾ ಸುಳ್ಳೇ? ಅಥವಾ ಎಳ್ಳಷ್ಟಾದರೂ ತಿರುಳಿರಬಹುದೋ?—ಎಂಬ ಅನುಮಾನ ತಲೆಹಾಕುತ್ತಿದೆ.

ಆಳ ಮನಸಲಿ ಹುದುಗಿದ
ಆಸೆ ಭಯಗಳ ಗೂಳ್ಯ,
ಮಸಣದಲಿ ಭೂತಗಳು ಮೆರೆಸುಂತೆ
ಕನಸಿನಲಿ ಹಾರಿ ನಲಿದಾಡುವವು.

—ಎಂದು ತನ್ನ ಸ್ವಂತ ಅನುಭವವನ್ನು ನೆನೆಸಿಕೊಂಡ ರಾಜ.

ನಿದ್ದೆ. ಮದ್ಯಗಳೆರಡೂ
ಮೋಸ ಸೋದರರು!

—ಎಂಬ ಸತ್ಯ ರಾಯನ ಮನಸ್ಸಿನಲ್ಲಿ ಊರಿತು.

ಅನುಮಾನ ಸರಸರನೆ ಸಂದೇಹವಾಗಿ ಬೆಳೆದು, ಸಂದೇಹ ಸಂಶಯವಾಗಿ ಹಬ್ಬಿ, ಸಂಶಯ ಬೇಗನೆ ಅರಸನ ಮನದಲ್ಲಿ ಭಯಂಕರ ನಿಜರೂಪವನ್ನೇ ತಾಳಿಬಿಟ್ಟಿತು! ಕಾಲು ಕಚ್ಚಿದ ಹಾವಿನ ವಿಷ ಎದೆಗೇರಿಬಿಡುವಂತೆ, ದಂತಿಲನ ಬಗ್ಗೆ ಅಪ ನಂಬಿಕೆ ರಾಜನನ್ನು ಸದಾ ಕಾಡಿಸಹತ್ತಿತು.

ಸಾಧು ದಂತಿಲನ ಪ್ರತಿಯೊಂದು ನಡೆನುಡಿಯೂ ರಾಜನಿಗೆ ಈಗ ಆಷಾಢಭೂತಿಯ ಆಟದಂತೆ ಕಾಣುತ್ತಿದೆ. ಈ ಕಡೆ ದಂತಿಲನಿಗೆ ರಾಜನ ಸಂಶಯದೃಷ್ಟಿ ಕಂಡು, ಗಲಿಬಿಲಿ, ಗಾಬರಿ. ಇದರಿಂದ ರಾಜಸೇವಕನ ನಗುಮುಖ, ಸರಳ

CC-O. Vidyabharathi Book Centre, Sringeri

 CC-O. In Public Domain. Digitized by eGangotri

ಸ್ವಭಾವ ಮಾಯವಾದುವು. ರಾಜನ ಮುಂದೆ ಮಾತಿನಲ್ಲಿ ತಬ್ಬಿಬ್ಬಾಗುತ್ತಾನೆ, ನಡೆಯಲ್ಲಿ ಎಡವುತ್ತಾನೆ. ಇವುಗಳಿಗೆ ದಂತಿಲನ ದ್ರೋಹ, ಅಳುಕುಮನಸ್ಸೇ ಕಾರಣ—ಎಂದು ನಿರ್ಧರಿಸಿದ ರಾಜ. ಇನ್ನು ಈ ಹಾವಿಗೆ ಹಾಲೆರೆಯಕೂಡದು —ಎಂದು ತೀರ್ಮಾನಿಸಿದ.

'ದಂತಿಲ, ನನ್ನ ನೆಚ್ಚಿನ ಮಿತ್ರ, ಆಪ್ತ ಸಲಹೆಗಾರ ಎಂದು ನಂಬಿದ್ದೆ'—ಎಂದು ಚಿಂತಿಸುತ್ತಾನೆ ಅರಸ. 'ಶ್ರೀಮಂತರಿಗೆ ನಿಜವಾದ ಸ್ನೇಹವಾಗಲಿ, ಪ್ರೇಮವಾಗಲಿ ಲಭಿಸುವುದೇ? ಸಂಪತ್ತು, ಪದವಿ, ಅಧಿಕಾರಗಳನ್ನು ಅನುಸರಿಸುವವರು ಭಕ್ತಿ, ವಿಶ್ವಾಸಗಳನ್ನು ನಟಿಸುತ್ತಾರಷ್ಟೆ. ರಾಜರು ನಿದ್ರೆ ತೊರೆದು ಜಾಗರೂಕತೆಯಿಂದಿರಬೇಕು,' ಎಂದು ಚಿಂತಿಸಿದ. ಇವನು ಪಿತೂರಿಗಾರ ಎಂದು ನಿಶ್ಚಯಿಸಿದ ರಾಜ, ದಂತಿಲನೊಡನೆ ಮಾತುಕತೆ, ಸಂಪರ್ಕಗಳನ್ನು ಕಡಿಮೆ ಮಾಡುತ್ತಾ ಬಂದ.

ಅರ್ಥವೇ ಆಗದ, ಕಾರಣವೇ ಇಲ್ಲದ ಅರಸನ ನಡವಳಿಕೆಯನ್ನು ಕಂಡ ದಂತಿಲ

ಅರಸರು ಚಂದಮನಂತೆ ಚಂಚಲರು;
ಮದಗಜದಂತೆ ಮುಂಗೋಪಿಗಳು!

—ಎಂದು ಮರುಗುತ್ತಾನೆ.

ಮೂರನೆಯ ದಿನ ರಾಜನಿವಾಸವನ್ನು ದಂತಿಲ ಸಮೀಪಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುತ್ತಿರುವಾಗ ಪಹರೆಯವರು ವರ್ತಕನನ್ನು ಕೋಟೆಯ ಆನೆಬಾಗಿಲಿನ ಹೊರಗೇ ತಡೆದುಬಿಟ್ಟರು. ಧನಿಯ ಮುನಿಸಿಗೇ ಕಾದಿರುತ್ತಾರೆ ಹೀನ ಸೇವಕರು: ಧಣಿ 'ದೊಣ್ಣೆ ತೆಗೆದುಕೊ' ಎಂದರೆ, ಆಳು ಕತ್ತಿಯನ್ನೇ ಎಳೆಯುತ್ತಾನೆ.

ರಾಜನನ್ನು ದಂತಿಲ ಭೇಟಿಮಾಡಲು ಕಾವಲುಗಾರರು ಒಪ್ಪಲಿಲ್ಲ. ತನಗೆ ಮಾಡಿರುವ ಈ ಶಿಕ್ಷೆಗೆ ತನ್ನ ಅಪರಾಧವಾದರೂ ಏನು?—ಎಂದು ಅರಸನನ್ನು ಕೇಳಿ, ಕ್ಷಮೆ ಬೇಡುವೆನೆಂದು ದಂತಿಲ ಅವರಿಗೆ ಹೇಳಿದ್ದೆಲ್ಲಾ ವ್ಯರ್ಥವಾಯಿತು.

'ಇದು ಅರಸುಗೋಳ ಅಪ್ಣೆ' ಎಂದ ದಿಮಾಕಿನಿಂದ, ಕತ್ತಿ ಸಿಪಾಯಿ. 'ಖಾಸಾ ದರ್ಶನ ಏಕೆ, ಕೋಟೆಯೊಳಗೇ ನಿಮ್ಮನ್ನ ಕಾಲಿಡಿಸಬೇಡಿ ಎಂದು ಅಂಕೆ ಮಾಡವ್ರೆ ಮಾರಾಜ್ರು,' ಎಂದು ನುಡಿದು ಬೆನ್ನು ತಿರುಗಿಸಿದ ಸಿಪಾಯಿ.

ಧಣಿಗಳಲ್ಲಿ ಒಬ್ಬರಿಗೊಬ್ಬರಿಗೆ ಮನಸ್ತಾಪ ಎದ್ದರೆ, ನೀಚ ನೌಕರರು, ಸಣ್ಣ ಕಿಡಿಗೆ ತುಪ್ಪ ಸುರಿದು ದೊಡ್ಡ ಉರಿ ಎಬ್ಬಿಸಿಬಿಟ್ಟು, ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಯತ್ನಿಸುವರು. ತಾಯಿತಂದೆಗಳ ಮಧ್ಯೆ ವಿರಸ ಹುಟ್ಟಿದರೆ, ಮಕ್ಕಳು ಒಬ್ಬರಲ್ಲ ಇನ್ನೊಬ್ಬರನ್ನು ಪಟಿಸಿಕೊಂಡು, ಅವರ ಪ್ರೀತಿ ಹೆಚ್ಚಿಸಿಕೊಳ್ಳಲು ಯತ್ನಿಸುವರು. ಆದ್ದರಿಂದಲೇ ತಮ್ಮ ಒಳಜಗಳಗಳನ್ನು ಜಾಣರು ಬೀದಿಗೆಳೆಯುವುದಿಲ್ಲ.

ದಂತಿಲ ಏನೂ ತೋಚದೆ ಸಪ್ಪೆಮುಖ ಹಾಕಿಕೊಂಡು ಕೋಟೆಬಾಗಿಲಿನಿಂದ ಹಿಂತಿರುಗಿದ. ಆಗ ಅಲ್ಲಿದ್ದ ಪಹರೆಯ

Sri Vidyabharathi Book Centre, Sringeri

 CC-O. In Public Domain. Digitized by eGangotri

ವರ ಕೊಠಡಿಯಿಂದ ಗೇಲಿ ಕೂಗೊಂದು ವರ್ತಕನನ್ನು ಅಟ್ಟಿಬಂದು ಕಿವಿಗೆ ಬಡಿಯಿತು.

'ಜೋಕೆ! ಜೋಕೆ! ಸಿಪಾಯಿಗೋಳಾ! ದಂತಿಲ ಮಾಸ್ಟಾಮಿಯೋರು ಊರ್ಗೆಲ್ಲ ದೊಡ್ಡ ಸಾವಕಾರ್ರೂ. ದೊಡ್ಡ ಬುದ್ದಿಯೋರ್ಗೆ ತುಂಬಾ ಬೇಕಾದೋರೂ,' ಎಂದು ಎಚ್ಚರಿಸಿತು, ಹಿಂದಿನಿಂದ ಬಂದ ಧ್ವನಿ. 'ಅವರ ಮದುವೆ ಮನೇಂದ ನನ್ನ ಕತ್ತಿಡ್ದ್ವೆ ದಬ್ದಾಂಗೆ ಮಾರಾಜರ ಕೈಲಿ ನಿಮ್ಮ ಚಾಕರಿ ಕಿತ್ತಾಕ್ಸಿಬಿಡ್ತಾರೆ! ಉಸಾರ್!'—ಎಂಬ ಕುಚೋದ್ಯದ ಕೂಗು ವರ್ತಕನನ್ನು ಹಿಂಬಾಲಿಸಿತು.

ಈ ಅಣಕದ ಮಾತು ಕೇಳಿ ಸಿಪಾಯಿಗಳೆಲ್ಲಾ ಘೊಳ್ ಎಂದು ನಗಲಾರಂಭಿಸಿದರು.

ಈಗ ದಂತಿಲನಿಗೆ, ಕದಡಿದ ನೀರಿಗೆ ಸ್ಪಟಿಕದ ಹರಳು ಹಾಕಿದಂತೆ, ತನ್ನ ಮೇಲೆ ರಾಜನ ಸಿಟ್ಟಿಗೆ ಕಾರಣವೇನೆಂಬುದು ಥಟ್ಟನೆ ಸ್ಪಷ್ಟವಾಯಿತು. ಅರಸನ ವಿಶ್ವಾಸವನ್ನು ಕಚ್ಚಿದ ಹಾವು ಇನ್ನಾವುದೂ ಅಲ್ಲ, ಅರಸನಿಗೆ ಅಂಟಿಕೊಂಡಿರುವ ಗೋರಂಭನೇ ಎಂಬುದನ್ನು ಮನಗಂಡ. ಅಲ್ಪನ ಅಪಹಾಸ್ಯ ಅವನನ್ನು ಸುಡುತ್ತಿದೆ. ಆದರೆ ಆಸರೆ ಇಲ್ಲದ ಬಳ್ಳಿಯಂತೆ ರಾಜನ ಕೃಪೆ ಕಳೆದುಕೊಂಡಿದ್ದ ವರ್ತಕ, ತಾನು ಶ್ರೀಮಂತನೇ ಆಗಿದ್ದರೂ, ರಾಜಸೇವಕನನ್ನು ಏನುತಾನೆ ಮಾಡಿಯಾನು?

CC-O. In Public Domain. Digitized by eGangotri

ರೋಗಕ್ಕಿಂತ ಆರೋಗ್ಯ ಬಲ ;
ಮುಪ್ಪಿಗಿಂತ ಪ್ರಾಯ ಬಲ ;
ಬಡತನಕ್ಕಿಂತ ಸಂಪತ್ತು ಬಲ ;
ಐಶ್ವರ್ಯಕ್ಕಿಂತ ಅಧಿಕಾರ ಬಲ.

—ಎಂದು ಚಿಂತಿಸುತ್ತಾ ಹಿಂತಿರುಗಿ ಮನೆ ಸೇರಿದ ದಂತಿಲ.

'ಬರೀ ಬೀಜ ತುಂಬಿದ ಅತ್ತಿ ಹಣ್ಣು ಮಹಾಮರಕ್ಕೆ ಅಂಟಿಕೊಳ್ಳುವಂತೆ, ಈ ಕಳ್ಳಭಂಟ ರಾಜನಿಗೆ ಅಂಟಿಕೊಂಡಿದ್ದಾನೆ. ಇಂತಹವರು, ಬೆಲ್ಲದುಂಡೆಗೆ ನೊಣಗಳಂತೆ, ತಮ್ಮ ಸ್ವಂತ ಲಾಭಕ್ಕಾಗಿಯೇ ರಾಜಭಕ್ತರಾಗುವುದು. ಇವರು ಧಣಿಯ ಮುಂದೆ "ಹಸಾದ" ಎಂದು ಸೊಂಟ ಕಟ್ಟಿ ತಲೆ ಬಾಗಿ ನಿಂತು, ಅವನ ಹಿಂದೆ ಒಡ ಪ್ರಜೆಗಳ ಮೇಲೆ ಸೊಕ್ಕಿನಿಂದ ದರ್ಪವನ್ನು ಚಲಾಯಿಸುವರು. ಶುಂಠರೇ ಆಗಲಿ, ಠಕ್ಕರೇ ಆಗಲಿ, ಇವರನ್ನು ಕೆಣಕಿದರೆ, ಅಲ್ಲೇ ಬರೆಹಾಕಿ ಬಿಡುವರು. ಯಜಮಾನನ ನಾಯಿಗೂ ಮರ್ಯಾದೆ ಕೊಡಲೇಬೇಕು,' ಎಂದು ಯೋಚಿಸಿದ ಪರ್ತಕ.

'ನಿಜವಾಗಿಯೂ ನಾನೇ ಪೆದ್ದ,' ಎಂದು ತನ್ನೊಳಗೇ ನಕ್ಕ ದಂತಿಲ. 'ರಾಜಸೇವಕನನ್ನು ಎದುರುಹಾಕಿಕೊಳ್ಳುವುದೇ ನಾನು ! ಅವನನ್ನು ಒಲಿಸಿಕೊಳ್ಳಲೇಬೇಕು,' ಎಂದು ನಿರ್ಧರಿಸಿದ.

ಅದಲ್ಲದೆ, ಊಳಿಗದವನಾದ ಅವನು ಗುಡಿಸಲಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದಿದ್ದಾನೆ ; ವಿದ್ಯೆ ಇಲ್ಲ, ವಿದ್ವಾಂಸರ ಸಹ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಸವಿಲ್ಲ. ಒಳ್ಳೆ ನಡತೆ, ವಿಶಾಲ ಮನಸ್ಸು ಹೇಗೆ ತಾನೆ ಅವನಲ್ಲಿ ಮೊಳೆಯಬೇಕು?—ಎಂದು ಮರುಕಪಟ್ಟ ರಾಜವರ್ತಕ. ಚುರುಕು ಮಕ್ಕಳಿಗೆ ಸವ್ಯಿದ್ಯೆಗೆ ಅವಕಾಶ ಸಿಗದಿದ್ದರೆ—ಬೇಸಾಯ ಮಾಡದೆ ಬಿಟ್ಟ ಹಸನಾದ ಭೂಮಿಯಲ್ಲಿ ಕಳೆಗಳು ತುಂಬುವಂತೆ—ಅವರು ಪುಂಡರಾಗುವುದರಲ್ಲೇನಾಶ್ಚರ್ಯ?—ಎಂದು ಚಿಂತಿಸಿದ ದಂತಿಲ. ತಡಮಾಡದೆ ಮಾರನೆಯ ದಿನವೇ ತನ್ನ ಭವನಕ್ಕೆ ರಾಜಸೇವಕನು ಭೇಟಿ ಕೊಡುವಂತೆ ಏರ್ಪಾಡು ಮಾಡಿದ ದಂತಿಲ.

ಬಂದೇ ಬಂದ ಗೋರಂಭ. ಒರಟ, ತಿಳಿಗೇಡಿ ಸೇವಕ ಗೆದ್ದ ಹುಂಜನಂತೆ ಸೊಕ್ಕಿನಿಂದ ಕೈ ಬೀಸುತ್ತಾ, ಮೈ ಕುಲುಕುತ್ತಾ ಬಂದಿಳಿದ. ಜನರ ಸ್ವಭಾವ ಅರಿತಿದ್ದ ದಂತಿಲ, ಸೇವಕನನ್ನು ತನ್ನ ಸರಿಸಮಾನನಂತೆ ಮರ್ಯಾದೆಯಿಂದ ಬರಮಾಡಿಕೊಂಡ. ಉಪಚಾರ ಮಾಡಿ, ಅವನಿಗೆ ತೃಪ್ತಿಯಾಗುವಷ್ಟು ಹಣ, ವಸ್ತ್ರ, ಒಡವೆಗಳನ್ನು ಹೊರಿಸಿಬಿಟ್ಟ ಶ್ರೀಮಂತ ದಂತಿಲ.

ಸ್ವಲ್ಪ ನೀರಿಗೆ ಚಿಗುರಿ, ಸ್ವಲ್ಪ ನೀರು ಕಡಿಮೆಯಾದರೆ ಬಾಡುವ ಕಿರುಬೇರಿನ ಸೊಪ್ಪಿನಂತೆ, ಗೋರಂಭನಿಗೀಗ ಖುಷಿಯೇ ಖುಷಿ! ಊರಿಗೇ ಶೆಟ್ಟಿ, ದಂತಿಲ—ಅಂಥವನು ತನ್ನದೇ ತಪ್ಪೆಂದು ಒಪ್ಪಿ, ಅವನ ಕ್ಷಮೆ ಬೇಡಿದಾಗ, ಗುಲಾಮ ಗೋರಂಭ ಸ್ವರ್ಗಕ್ಕೆ ಇನ್ನು ಮೂರೇ ಗೇಣು! ಎಂದು ಉಬ್ಬಿಬಿಟ್ಟ! ತನ್ನ ಸೇವಕನ ಸ್ಥಾನ, ಯೋಗ್ಯತೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತಮ ವರ್ತಕನಿಗೆ ಕೊಡಬೇಕಾದ ಗೌರವ—ಎಲ್ಲವನ್ನೂ ಮರೆತೇಬಿಟ್ಟು, 'ನಾ ನಿಮ್ಮನ್ನ ಮನ್ಸ್ಸೋತೀನಿ ; ಅಷ್ಟೇ ಅಲ್ಲ, ಮತ್ತೆ ಮಾರಾಜರ ದೋಸ್ತಿ ಮಾಡಿಸ್ತೀನಿ, ಅಂಜಬೇಡ್ರಿ. ಮಾರಾಜರ ಕೈಲಿ ಹೆಂಗಂದ್ರೆ ಹಂಗೆ ಮಾಡಸ್‌ಬಲ್ಲೆ ನಾನು,' ಎಂದು ಕೊಚ್ಚಿಕೊಂಡ ಗೋರಂಭ.

'ತುಂಬಾ ಉಪಕಾರ ಮಾಡಿದಹಾಗಾಗುತ್ತೆ, ಗೋರಂಭ,' ಎಂದು ಊಳಿಗದವನನ್ನು ತೃಪ್ತಿಪಡಿಸಿ ಕಳುಹಿಸಿಕೊಟ್ಟ ಜಾಣ ವರ್ತಕ.

ರಾಜಸೇವಕ ಅಷ್ಟು ಬೇಗ ಬದಲಾಯಿಸಿದುದನ್ನು ನೋಡಿ, ದಂತಿಲನಿಗೆ ಆಶ್ಚರ್ಯ ಹಾಗೂ ನಗು : ಒಂದು ಕ್ಷಣ, ಕೊಲ್ಲುವ ಶತ್ರು; ಮರುಕ್ಷಣವೇ ತಬ್ಬುವ ಮಿತ್ರ !

ತ್ರಾಸು ಕೋಲಿನಂತಿವರು, ಪೊಳ್ಳು ಜನ :
ತುಸಕೇರುವರು, ತುಸಕೆ ತಗ್ಗುವರಿವರು !

—ಎಂದು ನಸುನಗೆಯಿಂದ ಚಿಂತಿಸಿದ ವರ್ತಕ.

ಅದೇ ರಾತ್ರಿ, ತಂತ್ರಿ ಗೋರಂಭ ರಾಜನ ಮಲಗುಮನೆಯ ಬಾಗಿಲನ್ನು ಎಂದಿನಂತೆ ಕಾಯುತ್ತಿದ್ದಾನೆ. ಈಗ, ತನ್ನ ಹೊಸ ಗುರಿ ಸಾಧಿಸಲು ಏನು ಹೂಟ ಹೂಡಬೇಕೆಂಬುದನ್ನು ಆಗಲೇ ಯೋಚಿಸಿದ್ದಾನೆ. ಹಿಂದೆ ಕಟ್ಟಿದ್ದ ಆಟವನ್ನೇ ಈಗಲೂ ಕಟ್ಟಿಬಿಡುವುದು ಎಂದು ನಿಶ್ಚಯಿಸಿದ್ದಾನೆ. ಆದರೆ ಆ ಯುಕ್ತಿಯನ್ನು ಈಗ ತಿರುಗುಮುರುಗು ಮಾಡಿದ

Sri Vidyabharathi Book Centre, Sringeri

 CC-O. In Public Domain. Digitized by eGangotri

ಖದೀಮ. ಈ ಸಲ ರಾಜನನ್ನೇ ಗೇಲಿಗೆ ಗುರಿಮಾಡಿಬಿಟ್ಟ!

ಎಂದಿನಂತೆಯೇ ರಾಜನ ಕೊಠಡಿಯ ಬಾಗಿಲಲ್ಲಿ ನಿದ್ದೆ ಬಂದು ಗಳಗುತ್ತಿರುವವನಂತೆ ನಟಿಸುತ್ತಿದ್ದಾನೆ ಗೋರಂಭ.

'ಅಯ್ಯೋ! ಹಿಂಗೂ ಉಂಟಾ!?' ಎಂದು ಕಣ್ಣುಮುಚ್ಚಿ ಗೊಣಗಲಾರಂಭಿಸಿದ ಕಪಟಿ. ರಾಜನ ಲಕ್ಷ್ಯ ತನ್ನ ಕಡೆ ತಿರುಗಿದೆ ಎನ್ನಿಸಿದಾಗ, 'ಮಾಸ್ವಾಮಿಯೋರು! ಇದೇನು!? ಕಕ್ಕಸ್ಸಲ್ ಕೂತು ತಿಂತಪ್ರುಲ್ಲಾ! ಅಯ್ಯೋ ದೇವ್ರೇ! ಹೀಗೂ ಉಂಟಾ!?' ಎಂದು ಬಡಬಡಿಸಿದ.

ಸೇವಕನಿಂದ ಈ ಶುದ್ದ ಸುಳ್ಳುಮಾತು ಕೇಳಿ ರಾಜನಿಗೆ ತುಂಬಾ ಸಿಟ್ಟೇರಿತು! 'ನೀಚ! ಏನು ಬೊಗಳ್ತಿದೀಯ ನೀನು?' ಎಂದು ಗುಡುಗಿದ. 'ನಿನ್ನ ತಲೆ ಕತ್ತರಿಸಿಹಾಕ್ತೀನಿ, ತೊತ್ತೇ!' —ತನ್ನ ಮೂತಿಗೇ ಸೇವಕ ಮಸಿ ಬಳಿದನಲ್ಲಾ ಅಂತ ರಾಜನಿಗೆ ಈಗ ರೋಷ!

ಆಗತಾನೆ ಎಚ್ಚರವಾದವನಂತೆ ಗಾಬರಿಯಿಂದ ನೆಗೆದೆದ್ದ ಗೋರಂಭ. ಈಗ ಅವನಿಗೆ ಜೀವಭಯವೇ ಎದ್ದಿತು! ತನ್ನ ಜಾಣತನ ಮಿತಿಮೀರಿತು; ತನ್ನ ತಲೆ ಉರುಳುವುದು ಖಂಡಿತ —ಎಂದು ತಿಳಿದು ಅವನೀಗ ನಡುಗುತ್ತಿದ್ದಾನೆ!

ತಕ್ಷಣ, ನಿಜವಾದ ಕಣ್ಣೀರು ಸುರಿಸುತ್ತಾ ರಾಜನ ಪಾದಕ್ಕೆ ಬಿದ್ದು, 'ನಿದ್ದೇಲಿ ಮೈಮರ್ತು ಏನು ಪೊಟಗುಟ್ಟಿದೆನೋ ಅರಿಯೆ, ಒಡೆಯ! ದೊಡ್ಡ ಮನ್ಸ್ ಮಾಡಿ ಬಡಪಾಯೀನ ಬದುಕ್ಸ್‌ಬೇಕು ಮಾಸ್ವಾಮಿಯೋರು!' ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗಲಾಚಿಕೊಂಡು ಅರಸನನ್ನು ಬೇಡಿಕೊಂಡ ಗೋರಂಭ.

ಉತ್ತಮ ಸಂತತಿ, ಸಂಪತ್ತಿನಲ್ಲಿ ಹುಟ್ಟಿ ಬೆಳೆದವರು ಸಾಮಾನ್ಯವಾಗಿ ದಯಾಳುಗಳೂ ಉದಾರಿಗಳೂ ಆಗಿರುತ್ತಾರೆ. ತನ್ನ ತಪ್ಪನ್ನು ಒಪ್ಪಿಕೊಂಡು ಶರಣಾಗತನಾದ ಸೇವಕನನ್ನು ಮನ್ನಿಸಿದ ರಾಜ. 'ಕಾವಲಿರುವಾಗ ಇನ್ನೆಂದೂ ಮೈ ಮರೆಯಬೇಡ!' ಎಂದು ಎಚ್ಚರಿಸಿದ.

ಸೇವಕನ ಇಂದಿನ ಹರಟೆ ಅರಸನ ಮನಸ್ಸನ್ನು ಕಲಕಿತು; ಚಿಂತಿಸಹತ್ತಿದ ರಾಜ. ಎಲ್ಲಾ, ಈ ಅಲ್ಪನ ಕನವರಿಕೆ ಮಾತು ನಂಬಿ, ಗುಣವಂತ ಮತ್ತು ಆಪ್ತನಾಗಿದ್ದ ಸ್ನೇಹಿತ ದಂತಿಲನನ್ನು ಅರಮನೆಯಿಂದ ಅಟ್ಟಿದುದು ಸರಿಯೇ—ಎಂಬ ಪ್ರಶ್ನೆ ಅರಸನ ಮನಸ್ಸನ್ನು ಕೊರೆಯಹತ್ತಿತು. ತನ್ನ ಮೇಲೆ ಇವನು ಎಸೆದ ಕೊಚ್ಚೆನೀರಂತೆ, ದಂತಿಲನ ಮೇಲಿನ ಇವನ ಅಪವಾದವೂ ಸುಳ್ಳಂಪಳ್ಳೇ ಇರಬಹುದಲ್ಲವೇ— ಎಂದೆನಿಸಿತು.

ಗುಂಯ್ ಎಂದು ಕೂಗಿಡುವ ಒಂದೇ ಒಂದು ಸೊಳ್ಳೆ ರಾತ್ರಿಯ ನಿದ್ದೆಯನ್ನೆಲ್ಲಾ ಕೆಡಿಸುವಂತೆ, ಒಬ್ಬ ಸಣ್ಣ ಸೇವಕ ರಾಜ್ಯಾಧಿಪತಿಯ ಮನಸ್ಸನ್ನೇ ಹೇಗೆ ಕದಡಿಬಿಡಬಲ್ಲ, ಎಂದು ಮೂಗಿನ ಮೇಲೆ ಕೈ ಇಟ್ಟ ರಾಜ!

ಇನ್ನುಮೇಲೆ ದೂರುಮಾತಿಗೆ ಕಿವಿಕೊಡಕೂಡದು—ಏಕೆ, ದೂರುಮಾತು ಕಿವಿಗೆ ಬೀಳಲೂ ಅವಕಾಶ ಕೊಡಕೂಡದು— ಎಂದು ನಿರ್ಧರಿಸಿದ ರಾಜ. ಒಡನೆಯೇ

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri

ಗೋರಂಭನನ್ನು ತನ್ನ ಮಲಗುವ ಮನೆಯ ಕೆಲಸದಿಂದ ತೆಗೆದು, ದೂರದಲ್ಲಿನ ಕೋಟೆಯ ಆನೆಬಾಗಿಲು ಕಾವಲು ಗಾರನಾಗಿ ನೇಮಿಸಿದ.

ಬೆಳಗಾದೊಡನೆ ಮಹಾರಾಜ ದಂತಿಲನನ್ನು ಕರೆಕಳುಹಿಸಿದ. ರಾಜಸಭೆಯಲ್ಲಿ ಪುನಃ ಗೌರವಸ್ಥಾನವನ್ನು ಕೊಟ್ಟು, ಅವನನ್ನು ಎಂದಿನಂತೆಯೇ ತನ್ನ ಆಪ್ತ ಮಿತ್ರ, ಹಿತವಾದಿಯಾಗಿರುವಂತೆ ಇಟ್ಟುಕೊಂಡ ಅರಸ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

—ಹೊದಿಕೆಯ ಪುಟ ಎರಡರಿಂದ]

ಮುಖ್ಯ ಕಾರಣಗಳನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ. ಇದುವರೆಗೆ ಪ್ರಕಟವಾಗಿರುವ ಕೃತಿಗಳಲ್ಲೆಲ್ಲಾ ಮಾನವಸ್ವಭಾವ, ನ್ಯಾಯಾನ್ಯಾಯ ವಿವೇಚನೆ, ಸುಗಮ ಜೀವನಕ್ಕೆ ಸಹಾಯಕವಾದ ಚಾತುರ್ಯಗಳನ್ನು ಚಿತ್ರಿಸುವ ಪ್ರಯತ್ನಗಳು ಮಾತ್ರ ನಡೆದಿವೆ. ಆದರೆ 'ಹಿತೋಪದೇಶ'ವು ನಮ್ಮ ಈಗಿನ ಬರಹಗಾರರ ಮುಂದಿಟ್ಟಿರುವ ಅಮೂಲ್ಯ ಅವಕಾಶವನ್ನು ಕಥೆಗಾರರಾಗಲಿ, ಬೋಧಕರಾಗಲಿ ಸದುಪಯೋಗಪಡಿಸಿಕೊಳ್ಳದಿರುವುದು ಆತ್ಯಾಶ್ಚರ್ಯ!

ಇಂದುಮುಂದಿನ ಕಾಲಗಳು ದಿನೇದಿನೇ ಹೆಚ್ಚುಹೆಚ್ಚಾಗಿ ವಿಜ್ಞಾನಯುಗವಾಗುತ್ತಾ ಬರುತ್ತಿವೆ. ವನ್ಯಪ್ರಾಣಿಗಳು ತುಂಬಿ, ಮನೋಹರವಾಗಿ ಮಾನವಜೀವನವನ್ನು ಅನುಕರಿಸಿ ನಾಟಕವಾಡಿ ತೋರಿಸುವ ವಿಷ್ಣುಶರ್ಮನ ಕಥಾಸರಣಿಯಲ್ಲಿ ಪ್ರಾಣಿಸಂಬಂಧ ವಿಜ್ಞಾನವಿಚಾರಗಳನ್ನು ಮಕ್ಕಳಿಗೆ (ಏಕೆ, ವಯಸ್ಕರಿಗೂ) ಸ್ವಾರಸ್ಯವಾಗಿ ತಿಳಿಸಿ, ಪ್ರಾಣಿಶಾಸ್ತ್ರದಲ್ಲೇ ಕುತೂಹಲವನ್ನು ಕೆರಳಿಸುವ ಅವಕಾಶಗಳು ಎಷ್ಟಿವೆ!

ಇದನ್ನು ಕಂಡು ಮೊಟ್ಟಮೊದಲು ಇಂಗ್ಲಿಷಿನಲ್ಲಿ ಈ ಹೊಸ ಕಾರ್ಯವನ್ನು ಕೈಗೊಂಡೆ. ಕೆಲವು 'ಹೊಸ ರೂಪ'ದ ಕಥೆಗಳು *Bhavan's Journal*ನಲ್ಲಿ ಬಿಡಿಬಿಡಿಯಾಗಿಯೂ, ನಂತರ Macmillans (India)ರವರಿಂದ ಒಂದು ಗುಚ್ಛವಾಗಿಯೂ ಪ್ರಕಟವಾದುವು. ಈ ಕಥೆಗಳಲ್ಲಿ ಸಮಯಾನುಸಾರ ಜಂತುಗಳ ದೇಹರಚನೆ, ಒಳಾಂಗಗಳ ಕ್ರಿಯಾರೀತಿ, ಆಯಾ ಪ್ರಾಣಿಗಳ ಸ್ವಭಾವ, ಪರಸ್ಪರ ವ್ಯತ್ಯಾಸ, ವೈಶಿಷ್ಟ್ಯಗಳನ್ನು ಮಕ್ಕಳಿಗೆ ಆಕರ್ಷಣೀಯವಾಗಿ ಚಿತ್ರಿಸಲು ಯತ್ನಿಸಿದ್ದೇನೆ.

ನಾಟಕೀಯವಾಗಿರುವ ಕೆಲವು 'ಹಿತೋಪದೇಶ'ದ ಕಥೆಗಳನ್ನು ಮಕ್ಕಳ ರಂಗಕ್ಕೆ ಅಳವಡಿಸಿದ್ದೇನೆ. ಈಗ ಕೆಲವು ಕಥೆಗಳನ್ನೂ, ಮಕ್ಕಳ ನಾಟಕಗಳನ್ನೂ 'ಹೊಸ ರೂಪದ ಹಿತೋಪದೇಶ' ಎಂಬ ಮಾಲೆಯಲ್ಲಿ ಗೀತಾ ಬುಕ್ ಹೌಸ್ ಪ್ರಕಾಶಕರು ಕನ್ನಡದಲ್ಲಿ ಪ್ರಕಟಿಸುತ್ತಿದ್ದಾರೆ. ವಿಜ್ಞಾನದ ಚಿಮಿಕಿ ಅಂಗಿ ತೊಟ್ಟಿರುವ ಈ ಸರಣಿ ಮೂಲ ಇಂಗ್ಲಿಷ್ ಸರಣಿಯಂತೆ ಜನಪ್ರಿಯವಾದರೆ, ಈ ಕಾರ್ಯದಲ್ಲಿ ಭಾಗವಹಿಸಿರುವ ನಮಗೆಲ್ಲಾ ಸಂತೋಷ, ತೃಪ್ತಿ.

ಮೈಸೂರು
ನವೆಂಬರ್ 1, 1985

ಕೆ. ಎಸ್. ರಂಗಪ್ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳ ಸಾಹಿತ್ಯ

ಹೊಸ ರೂಪದ 'ಹಿತೋಪದೇಶ'—ಕೆ. ಎಸ್. ರಂಗಪ್ಪ

1. ಕಥೆಗಳ ಕಥೆ ಮತ್ತು ಕುಟೀಪ್ಪಯ ಕೋತಿ 3 00
2. ಕಳ್ಳನಿಗೆ ಪೂಜೆ 3 00
3. ದಿಟ್ಟ ಮೊಲ 3 00
4. ಕೊಲೆಗಾರನ ಕೊಲೆ (ಮಕ್ಕಳ ನಾಟಕ) 3 00
5. ಹೀನ ಸೇವಕ 3 00
6. ರಾವಣ ಸನ್ಯಾಸಿ (ಮಕ್ಕಳ ನಾಟಕ) 3 00

'ನೀತಿಕಥಾಭಂಡಾರ' (ಸಚಿತ್ರ)—ಎ. ಎನ್. ಭಟ್

1. ಹೊಲದಲ್ಲಿ ಬಿತ್ತಿದ ಹಣ ಮತ್ತು ಇತರ ಕಥೆಗಳು 3 00
2. ಪಾರಿವಾಳದ ಪಂಚಶೀಲ ಮತ್ತು ಇತರ ಕಥೆಗಳು 3 00
3. ಬಲವೋ, ಬುದ್ಧಿಯೋ? ಮತ್ತು ಇತರ ಕಥೆಗಳು 3 00
4. ಕೋತಿ-ನಾಯಿ ಜಗಳ ಮತ್ತು ಇತರ ಕಥೆಗಳು 3 00
5. ಹದ್ದು-ಕರಡಿಯ ನ್ಯಾಯಸಂಧಾನ ಮತ್ತು ಇತರ ಕಥೆಗಳು 3 00

ಪುಟ್ಟಣ್ಣ ಹೇಳಿದ ಕಥೆಗಳು (ಸಚಿತ್ರ)—ಎಂ. ಎಸ್. ಪುಟ್ಟಣ್ಣ

1. ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು 3 00
2. ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು 3 00
3. ನ್ಯಾಯಾಧಿಪತಿಯ ಯುಕ್ತಿ ಮತ್ತು ಇತರ ಏಳು ಕಥೆಗಳು 3 00

ಕಾಲೆಯ ಕಥೆಗಳು—ಕೆ. ರಾಮಕೃಷ್ಣ ಉಡುಪ

1. ಆ ಒಂದು ರೂಪಾಯಿ! 3 00
2. ಸತ್ಯದ ಸಾಮರ್ಥ್ಯ 3 00
3. ನಮ್ಮಣ್ಣ 3 00

ಮಕ್ಕಳ ಕವನಗಳು—ಚಂದ್ರಶೇಖರಯ್ಯ

1. ತುಂಟರ ಕ್ರಿಕೆಟ್ ಮತ್ತು ಇತರ ಮಕ್ಕಳ ಕವನಗಳು 4 00

ಭಾರತ ಸರಕಾರದಿಂದ ಬಹುಮಾನಿತ ಪುಸ್ತಕಗಳು (ಸಚಿತ್ರ)

1. ಬ್ರಹ್ಮಾಂಡ ನೋಡು, ವಿಜ್ಞಾನ ಕಲಿ—ಸಿ. ಕೆ. ವೆಂಕಟನರಸಿಂಹಯ್ಯ 6 00
2. ನಮ್ಮ ಮನಸ್ಸು—ಕೆ. ರಾಮಕೃಷ್ಣ ಉಡುಪ 3 75
3. ಕಾಷ್ಠ-ಶಿಲ್ಪ—ಟಿ. ಎನ್. ಮಹಾಲಕ್ಷ್ಮಿ 3 75

Sri Vidyabharathi Book Centre, Sringeri

ಗೀತಾ ಬುಕ್ ಹೌಸ್ : ಕೆ. ಆರ್. ಸರ್ಕಲ್ : ಮೈಸೂರು

ಬೆಲೆ : ರೂ. 3